**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**
**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ 75/2018
ಪಿಡಬ್ಲು :18 ಸಿಡಬ್ಲು :14

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ.ರಾಜು ಮಹಾದೇವ ಸಂದ್ರಿಮನಿ |
| ತಂದೆಯ ಹೆಸರು | : | ಶ್ರೀ.ಮಹಾದೇವ ಸಂದ್ರಿಮನಿ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ಪೇಂಟರ |
| ವಾಸ್ತವ್ಯ | : | ಮುಗಳಖೋಡ |
| ದಿನಾಂಕ | : | 29-08-2025 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ1, ಚಾಸಾಃ 9 ರಿಂದ ಚಾಸಾಃ 13, ಚಾಸಾಃ16 ರಿಂದ ಚಾಸಾಃ 34 ನಮ್ಮ ಸಮಾಜದವರು ಮತ್ತು ನಮ್ಮ ಊರಿನವರು. ಚಾಸಾಃ15 ಮಹಾದೇವ ಸಂದ್ರಿಮನಿ ನಮ್ಮ ತಂದೆ. ನಾನು ಪರಿಶಿಷ್ಟ ಜಾತಿಯ ಮಾದರ ಜನಾಂಗಕ್ಕೆ ಸೇರಿದ್ದೇನೆ. ಆರೋಪಿತರು ನಮ್ಮ ಊರಿನವರು, ಅವರು ಜೈನ ಸಮುದಾಯಕ್ಕೆ ಸೇರಿದ್ದಾರೆ.

2. ನಮ್ಮೂರಿನ ಯಲ್ಲಮ್ಮ ದೇವಿ ಪಾದ ಕಟ್ಟೆ ಹತ್ತಿರ ಗಾಂವಠಾಣಾ ಜಾಗ ಇದ್ದು ನಾವು ಸುಮಾರು 50-60 ವರ್ಷಗಳಿಂದ ಅದೇ ಜಾಗದಲ್ಲಿ ವಾಸವಾಗಿದ್ದೇವೆ. ನಮ್ಮ ಮನೆಯಿಂದ ಪೂರ್ವ ದಿಕ್ಕಿಗೆ ಗಾಂವಠಾಣಾಗೆ ಸೇರಿದ ಖಾಲಿ ಜಾಗ ಇದೆ. ಆ ವಿಚಾರವಾಗಿ ನಮ್ಮ ಸಮಾಜದವರಿಗೆ ಜೈನ ಸಮಾಜದವರಿಗೂ ಸುಮಾರು 5-6 ತಿಂಗಳಿನಿಂದ ತಕಾರರು ನಡೆಯುತ್ತಿತ್ತು. ಆ ಸ್ಥಳದಲ್ಲಿ ನಾವು ನಮ್ಮ ಸಮಾಜದ ಸಮುದಾಯ ಭವನವನ್ನು ಕಟ್ಟಬೇಕೆಂದು ಮುಗಳಖೋಡ ಪುರಸಭೆಗೆ ಹಾಗೂ ರಾಯಬಾಗ ತಹಶೀಲ್ದಾರ ಅವರಿಗೆ

ಮನವಿ ಮಾಡಿದ್ದೇವು. ಆ ಸ್ಥಳವನ್ನು ಸುಮಾರು 50-60 ವರ್ಷಗಳಿಂದ ನಮ್ಮ ಸಮಾಜದವರು ಉಪಯೋಗಿಸುತ್ತಿದ್ದೇವೆ.

3. ದಿನಾಂಕಃ 26-08-2017 ರಂದು ನಮ್ಮ ಸಮಾಜದ ದುರ್ಗಪ್ಪ ಪೂಜೇರಿ ಅವರು ಜೈನ ಸಮಾಜದವರು ಖಾಲಿ ಜಾಗದಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಸಿದ್ದಾರೆ ಆ ವಿಷಯವಾಗಿ ಪುರಸಭೆಗೆ ಹೋಗಬೇಕೆಂದು, ಹಿರಿಯರು ಹೇಳಿದ್ದಾರೆ ಎಂದು ತಿಳಿಸಿದನು. ಸುಮಾರು ಒಂದು ಗಂಟೆ ನಂತರ ಎಲ್ಲರೂ ಪುರಸಭೆಗೆ ಹೋಗುವ ದಾರಿಯಲ್ಲಿ ಜೈನ ಸಮುದಾಯದವರು ಕಟ್ಟಡ ಕಟ್ಟುತ್ತಿರುವುದು ಕಂಡು ಬಂತು. ಆ ಸಮಯದಲ್ಲಿ ಸ್ಥಳದಲ್ಲಿದ್ದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದಲ್ಲಿ ಹಾಜರಾಗಿರುವ ಆರೋಪಿತರನ್ನು ಸಾಕ್ಷಿ ಗುರುತಿಸಿದ್ದು, ಇನ್ನೂ ಇತರರು ಇದ್ದರು ಎಂದು ಹೇಳಿದ್ದಾರೆ.

4. ನಾವು ಪುರಸಭೆಗೆ ಹೋಗಿ ಚೀಪ್ ಆಫೀಸರನ್ನು ಭೇಟಿ ಮಾಡಿ ವಿಚಾರವನ್ನು ಹೇಳಿದ್ದೇವೆ. ಅವರು ಹೊಸದಾಗಿ ಬಂದಿದ್ದ ಕಾರಣ ಅವರ ಸಿಬ್ಬಂದಿಯವರನ್ನು ವಿಚಾರಿಸಿದರು. ಅವರುಗಳು ಆ ಸ್ಥಳದ ಬಗ್ಗೆ ತಕರಾರು ಇದೆ ಎಂದು ಹೇಳಿ, ಈ ಹಿಂದೆ ಅವರಿಗೆ ನೋಟಿಸನ್ನು ಅಂಚೆ ಮೂಲಕ ನೀಡಲಾಗಿತ್ತು ಎಂದು ಅವರು ಅದನ್ನು ಸ್ವೀಕರಿಸಿರುವುದಿಲ್ಲ ಎಂದು ಹೇಳಿದರು.

5. ನಂತರ ಚಾಸಾಃ 35 ಚೀಪ್ ಆಫೀಸರ, ಚಾಸಾಃ 36 ಅಧ್ಯಕ್ಷರು ಮತ್ತು ಸಿಬ್ಬಂದಿಯವರು ಸ್ಥಳಕ್ಕೆ ಬಂದರು. ಚಾಸಾಃ 35 ಚೀಪ್ ಆಫೀಸರವರು ಆರೋಪಿತರಿಗೆ ಕಟ್ಟಡ ಕಟ್ಟಲು ಅನುಮತಿ ನೀಡಿಲ್ಲ ಎಂದು ಹೇಳಿದ್ದರು. ಅದಕ್ಕೆ ಆರೋಪಿತರು ಚಾಸಾಃ 35 ಚೀಪ್ ಆಫೀಸರವರಿಗೆ ಅದನ್ನು ಕೇಳಲು ನೀವು ಯಾರು ಎಂದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈಯಲು ಪ್ರಾರಂಭಿಸಿದರು. ಚಾಸಾಃ 35 ಚೀಫ್ ಆಫೀಸರ ಅವರು ಸ್ಥಳದಲ್ಲಿ ಕಟ್ಟಡ ಕಟ್ಟಬೇಡಿ ಪುರಸಭೆಗೆ ಬನ್ನಿ ವಿಚಾರ ಮಾಡೋಣ ಎಂದು ಹೇಳಿದ್ದಕ್ಕೆ, ಆರೋಪಿತರು ನಾವು ಅಲ್ಲಿಗೆ ಬರುವುದಿಲ್ಲ, ನೀವು ಏನೂ ಬೇಕಾದರೂ ಮಾಡಿಕೊಳ್ಳಿ ಎಂದು ಚಾಸಾಃ 35 ಚೀಫ್

ಆಫೀಸರ ಅವರಿಗೆ ಬೈಯುತ್ತಿದ್ದರು. ಮಾದರ ಜಾತಿಯವರೊಂದಿಗೆ ಸೇರಿ ಕಟ್ಟಡ ಕೆಲಸ ನಿಲ್ಲಿಸಲು ಬಂದಿದ್ದೀರಿ ಎಂದು ಆರೋಪಿತರು ಚಾಸಾಃ 35 ಚೀಫ್ ಆಫೀಸರ ಅವರಿಗೆ ಬೈದರು.

6. ಆ ಸಮಯದಲ್ಲಿ ನಮ್ಮ ಸಮಾಜದ ಪ್ರಕಾಶ ಕಡಕೋಳ ಎನ್ನುವವರು ಕಲ್ಲಿನ ಗುಡ್ಡೆಯ ಮೇಲಿಂದ ಕೆಳಗೆ ಜಾರಿ ಬಿದ್ದರು, ನಮ್ಮ ಸಮಾಜದವರು ಆತನನ್ನು ಎಬ್ಬಿಸಲು ಹೋದಾಗ ಆರೋಪಿತರು ನಮಗೆ ನಾವು ಮಾದರ ಜಾತಿಯವರು ಎಂದು ಹೇಳಿ ಜಾತಿ ಹೆಸರು ಹಿಡಿದು ಕೂಗುತ್ತಾ ಬಡಿಗೆ, ಕಲ್ಲು ಮತ್ತು ಕಬ್ಬಿಣದ ರಾಡನಿಂದ ನಮಗೆ ಹಲ್ಲೆ ಮಾಡಲು ಪ್ರಾರಂಭಿಸಿದರು. ನಾವು ಹೆದರಿಕೊಂಡು ಓಡಿಹೋಗುತ್ತಿದ್ದಾಗ ಕಲ್ಲಿನಿಂದ ನನ್ನ ತಲೆಗೆ ಏಟು ಬಿತ್ತು. 3 ನೇ ಆರೋಪಿ ನೇಮಿನಾಥ ಬಾಬನ್ನವರ ಎನ್ನುವವರು ನನ್ನ ತಲೆಗೆ ಕಲ್ಲಿನಿಂದ ಹೊಡೆದರು. ಅದರಿಂದ ನನ್ನ ತಲೆಗೆ ಪೆಟ್ಟಾಗಿ ನಾನು ಕೆಳಗೆ ಬಿದ್ದೇನು. ನನಗೆ ಏನೂ ಸರಿಯಾಗಿ ಕಾಣದಾಗಿತ್ತು, ನಮ್ಮ ಸಮಾಜದ ಹೆಣ್ಣುಮಕ್ಕಳು ಬಂದು ನನ್ನನ್ನು ಆ ಸ್ಥಳದಿಂದ ದೂರಕ್ಕೆ ಕರೆದುಕೊಂಡು ಹೋದರು. ಬಸಪ್ಪ ಮಾದರ ಅವರಿಗೆ ಹೆಚ್ಚು ಗಾಯ ಆಗಿತ್ತು ಮತ್ತು ಇತರರಿಗೂ ಸಹ ಗಾಯಗಳು ಆಗಿದ್ದವು. ನಂತರ ನಮ್ಮಗಳನ್ನು ನಮ್ಮ ಸಮಾಜದವರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ನಮಗೆ ಪ್ರಥಮ ಚಿಕಿತ್ಸೆಯನ್ನು ನೀಡಿದ್ದು, ನಂತರ ನಮ್ಮಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಹಾರೂಗೇರಿಯ ನಾರಗೊಂಡ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು.

7. ಘಟನೆಯ ಬಗ್ಗೆ ಚಾಸಾಃ 1 ಬಸಪ್ಪ ಅವರು ಪೋಲಿಸರಿಗೆ ದೂರು ನೀಡಿದ್ದಾರೆ. ನಾನು ನಾರಗೊಂಡ ಆಸ್ಪತ್ರೆಯಲ್ಲಿದ್ದಾಗ ಪೋಲಿಸರು ಬಂದು ನನ್ನ ಹೇಳಿಕೆಯನ್ನು ತೆಗೆದುಕೊಂಡಿದ್ದಾರೆ. ಆರೋಪಿತರು ಹಲ್ಲೆ ಮಾಡಿದ ಕಬ್ಬಿಣದ ಸರಳು, ಬಂಬು ಬಡಿಗೆ ಹಾಗೂ ಕಲ್ಲುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಹಾಜರುಮಾಡಿರುವ ಕಬ್ಬಿಣದ ಸರಳು, ಬಂಬು ಬಡಿಗೆ ಹಾಗೂ ಕಲ್ಲುಗಳನ್ನು ಸಾಕ್ಷಿ

ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ಮು.ಮಾ.1, ಮು.ಮಾ.2 ಮತ್ತು ಮು.ಮಾ.3 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜಿ. ವಕೀಲರಿಂದ**

ನಾನು ಕನ್ನಡ ಮಾಧ್ಯಮದಲ್ಲಿ ದ್ವಿತಿಯ ಪಿ.ಯು.ಸಿ ವರೆಗೆ ಓದಿದ್ದೇನೆ. ನಮ್ಮ ಸಮಾಜದಲ್ಲಿ ನನ್ನಂತೆ ಶಾಲೆ ಕಲೆತವರು ಬಹಳ ಜನ ಇದ್ದಾರೆ ಎನ್ನುವುದು ಸರಿ. ನಾನು ಸುಮಾರು 15 ವರ್ಷಗಳಿಂದ ಪೇಂಟಿಂಗ್ ಕೆಲಸ ಮಾಡುತ್ತೇನೆ. ಆರೋಪಿತರಿಗೆ ಕಟ್ಟಡ ಕಟ್ಟಲು ಅನುಮತಿ ನೀಡಿದ್ದ ವಿಚಾರ ನಿಮಗೆ ಯಾವಾಗ ತಿಳಿಯಿತು ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರಿಗೆ ಅನುಮತಿ ಸಿಕ್ಕಿಲ್ಲ ಎಂದು ಹೇಳಿದ್ದಾರೆ. " ನಾನು ಪೋಲಿಸರ ಮುಂದೆ ದಿನಾಂಕಃ 27-08-2017 ರಂದು ಹೇಳಿದ ಹೇಳಿಕೆಯಲ್ಲಿ ಸದರಿ ಜಾಗೆಯಲ್ಲಿ ಕಟ್ಟಡ ಕಟ್ಟಲು ಮೊದಲು ಇದ್ದ ಚೀಫ್ ಆಫೀಸರ ಖಿಲಾರಿ ಅವರು ಅನುಮತಿ ಕೊಟ್ಟಿದ್ದರು ನಂತರ ಅದನ್ನು ರದ್ದು ಪಡಿಸಿರುತ್ತಾರೆ " ಎಂದು ನಾನು ಹೇಳಿಕೆಯಲ್ಲಿ ಹೇಳಿದ್ದೇನೆ. ಈ ವಿಚಾರ ನನಗೆ ನಾನು ಹೇಳಿಕೆ ಹೇಳುವ ಮೊದಲು ತಿಳಿದಿತ್ತು. ಎಷ್ಟು ಜನರ ಹೆಸರಿನಲ್ಲಿ ಅನುಮತಿ ನೀಡಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಬಾಬನ್ನವರ ಅವರು ಕಟ್ಟಡ ಕಟ್ಟುತ್ತಿದ್ದ ನಿವೇಶನದ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ನಾವು ಪುರಸಭೆಗೆ ಅರ್ಜಿ ಕೊಟ್ಟು ಯಾರ ಹೆಸರಿನಲ್ಲಿದೆ ಎನ್ನುವುದು ಪರಿಶೀಲಿಸಿರುವುದಿಲ್ಲ.

2. ವಿವಾದಿತ ಜಮೀನು ಯಾರ ಹೆಸರಿನಲ್ಲಿದೆ ಎಂದು ದಾಖಲೆಗಳನ್ನು ಪರಿಶೀಲಿಸಿದ್ದೀರಾ ಎನ್ನುವುದಕ್ಕೆ ಸಾಕ್ಷಿ ಹೌದು ಎಂದು ಉತ್ತರಿಸಿ ಅದು ಸರ್ಕಾರಿ ಗಾಂವಠಾಣಾ ಜಾಗ ಎಂದು ಹೇಳಿದ್ದಾರೆ.

3. ಬಾಬನ್ನವರರವರು ವಿವಾದಿತ ಸ್ಥಳದಲ್ಲಿ ಅನುಮತಿ ಇಲ್ಲದೆ ಕಟ್ಟಡ ಕಟ್ಟುತ್ತಿದ್ದಾರೆ ಎನ್ನುವ ವಿಚಾರದಲ್ಲಿ ನೀವು ದಾವೆ ಮಾಡಿದ್ದೀರಾ ಎನ್ನುವುದಕ್ಕೆ ಸಾಕ್ಷಿಯು ನಮ್ಮ ಸಮಾಜದವರು ಸಿವಿಲ್ ದಾವೆ ಮಾಡಿದ್ದಾರೆ ಎಂದು ಹೇಳಿದ್ದಾರೆ.

4. ಆ ದಾವೆ ಏನಾಯಿತು ಎಂದು ನನಗೆ ಗೊತ್ತಿರುವುದಿಲ್ಲ. ವಿವಾದಿತ ಜಾಗವನ್ನು ಸರ್ಕಾರದವರು ನಮ್ಮ ಸಮಾಜದವರಿಗೆ ನೀಡಿರುವ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಭೂಕಬಳಿಕೆ ನ್ಯಾಯ ಮಂಡಳಿ, ಬೆಂಗಳೂರಿಗೆ ನಾವು ಸಲ್ಲಿಸಿದ ಅರ್ಜಿ 2018 ರಲ್ಲಿ ವಜಾ ಆಗಿದೆ ಎನ್ನುವುದು ಸರಿ.

5. ಆರೋಪಿತರಲ್ಲಿ ಜೈನರು, ಲಿಂಗಾಯತರು ಮತ್ತು ಕುರುಬ ಜಾತಿಗೆ ಸೇರಿದವರು ಸಹ ಇದ್ದಾರೆ ಎನ್ನುವುದು ಸರಿ. ವಿವಾದಿತ ಜಾಗವನ್ನು ನಮ್ಮ ಸಮುದಾಯದವರಿಗೆ ನೀಡಬೇಕೆಂದು ನಾವು ಸರ್ಕಾರಕ್ಕೆ ಘಟನೆ ನಡೆಯುವ ಒಂದು ವರ್ಷಗಳ ಮೊದಲೇ ಮನವಿ ಮಾಡಿದ್ದೇವೆ. ಆ ಮನವಿಯ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ.

6. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ಆಗಿರುವುದಿಲ್ಲ, ನನಗೆ ಆರೋಪಿತರು ಜಾತಿ ಹೆಸರು ಹಿಡಿದು ಜಾತಿ ನಿಂದನೆ ಮಾಡಿರುವುದಿಲ್ಲ, ಬೈದಿರುವುದಿಲ್ಲ, ಕಲ್ಲಿನಿಂದ ಹೊಡೆದಿರುವುದಿಲ್ಲ ಎನ್ನುವುದು ಸರಿಯಲ್ಲ. ಗ್ರಾಮದಲ್ಲಿ ಮು.ಮಾ.1, ಮು.ಮಾ.2 ಮತ್ತು ಮು.ಮಾ.3 ರಂತಹ ವಸ್ತುಗಳು ಬಹಳ ಇವೆ ಎನ್ನುವುದು ಸರಿ.

7. ಯಾವುದೇ ಘಟನೆ ನಡೆಯದೇ ಇದ್ದರೂ ಸಹ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನಗಾಗಲೀ, ನಮ್ಮ ಸಮಾಜದವರಿಗಾಗಲೀ ಘಟನೆಯಲ್ಲಿ

ಗಾಯಗಳು ಆಗಿಲ್ಲ, ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಹೋಗಿಲ್ಲ ಎನ್ನುವುದು ಸರಿಯಲ್ಲ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿಲ್ಲ ಎನ್ನುವುದು ಸರಿಯಲ್ಲ. ಇಂದು ಪೋಲಿಸರು ನನಗೆ ಹೇಳಿಕೊಟ್ಟ ಪ್ರಕಾರ ನಾನು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲುಃ 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ**

1 ಮತ್ತು 2 ನೇ ಆರೋಪಿತರ ಪರ ಶ್ರೀ. ಬಿ.ಜೆ.ಜೆ. ವಕೀಲರು ಮಾಡಿದ ಪಾಟೀ ಸವಾಲನ್ನು 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.